ಯೋಚ್ನೆ ಮಾಡಬೇಕಾಗ್ತದೆ' ಅಂತ ವೀರೇಂದ್ರ ಕುಲಕರ್ಣಿ ನಯವಾಗಿ ಗುಡುಗಿದಾಗ ಭೀಮವ್ವ ಮರುಮಾತಾಡಲಿಲ್ಲ. 'ಒಂದು ಸುತ್ತು ಹತ್ತಿ ಕೀಳ್ತಾ ಇರಿ, ಅಷ್ಟೊತ್ಗೆ ಫೋಟೊಗ್ರಾಫರ್ ಬಂದುಬಿಡ್ತಾನೆ' ಅನ್ನುತ್ತಾ ಅವನು ಕಾರಿನ ಕಡೆ ನಡೆಯುತ್ತಿದ್ದಂತೆ ಇವಳು ಹೊಂಡದ ಕಡೆ ನಡೆದಳು. ಮುಖದ ಮೇಲೆ ನೀರು ಹನಿಸಿಕೊಂಡು ಮಾಲೀಕ ತರಿಸಿಕೊಟ್ಟಿದ್ದ ರೊಟ್ಟಿಗೆ ಕೈ ಹಾಕಲಾಗದೆ ಅದರ ಮೇಲೆ ಬಿದ್ದುಹೋದಳು, ಮೃತದೇಹದಂತೆ. ಇಂತಹುದ್ದನ್ನೆಲ್ಲ ರೂಢಿಸಿಕೊಂಡಿದ್ದ ಗಟ್ಟಿಗಿತ್ತಿಯರಿಗೆ ಭೀಮವ್ವಳ ಕುಸಿತ ಅಚ್ಚರಿ ತರಿಸಲಿಲ್ಲ. ಮತ್ತದೇ ಗೊಣಗಾಟ, ಒದೆತ, ಉಗಿತ... ಅವನ ಕಣ್ಣು ತಪ್ಪಿಸಿಕೊಳ್ಳುವಂತಿಲ್ಲ, ಎದುರಿಗೇ ಕುಳಿತಿರಬೇಕು. ಎಷ್ಟೇ ದೀರ್ಘ ನಿದ್ರೆಯಲ್ಲಿರಲಿ, ಅವನು ಮಾತಾಡಿದ ಕೂಡಲೇ 'ಹ್ಞಾಂ...' ಅನ್ನಬೇಕು, ಇಲ್ದೆಹೋದರೆ ತಂಬಿಗೆಯಲ್ಲೇ ಬೀಸಿ ಹೊಡೆದುಬಿಡುವನು, ಈ ಹಣೆಗಾಯ ಹೀಗೆ ಹುಟ್ಟಿಕೊಂಡಿದ್ದು. ತೌರಮನೆ ಆಸೆ ಉಂಟಾಗುತ್ತದೆ ಎನ್ನುವ ಕಾರಣಕ್ಕೆ ಚನ್ನವ್ವ ಮತ್ತು ಯಲ್ಲಾಲಿಂಗ ಇತ್ತ ಕಡೆ ಸುಳಿಯುತ್ತಲೇ ಇಲ್ಲ. ಚೌಡಿಕೆ ಮೇಳ ಮಾಡಲೆಂದು ಇಲ್ಲೇ ಹತ್ತಿರದ ಹಳ್ಳಿಗೆ ಬಂದುಹೋದಳಂತೆ, ಎಷ್ಟು ನಿರ್ದಯಿಯಾಗಿಬಿಟ್ಟಳು! ಇವನಿಗೆ ಜೈಪುರದ ಕಾಲು ಹೊಂದಿಸಿಕೊಡಲು ತನ್ನ ಜೀವ ಒತ್ತೆಯಿಟ್ಟರೂ ಸಾಧ್ಯವಾಗುವುದಿಲ್ಲವಲ್ಲ, ಪುರಾಣದ ಕಥೆಗಳಲ್ಲಿ ಮಹಾಸತಿಯರು ಎಂತೆಂಥ ಗಂಡಸರನ್ನು ಹೇಗೆಲ್ಲ ಹರಸಾಹಸಪಟ್ಟು ಉಳಿಸಿಕೊಂಡರು. ಅದೊಂದು ಕೆಟ್ಟ ಮಾದರಿ ಈ ಆಧುನಿಕ ಕಾಲದವರೆಗೂ ನಡೆದುಕೊಂಡು ಬಂದುಬಿಟ್ಟಿತಲ್ಲ.

* * *

ಎಷ್ಟೊಂದು ಹತ್ತಿಕೊಯ್ಲುಗಳು ಸಂದುಹೋದವು, ಈ ಸಲ ಹೊರ ರಾಜ್ಯಗಳ ಹತ್ತಿ ಬೇಡಿಕೆಯನ್ನು ತೀರಿಸಲೇಬೇಕು, ಅವರು ಸಾಕೆನ್ನುವಷ್ಟು. ಪಾಕಿಸ್ತಾನ ಕೂಡ ಹತ್ತಿಗಾಗಿ ಭಾರೀ ಬೇಡಿಕೆಯನ್ನೇ ಇಟ್ಟಿದೆ, ಕೆಲಸವೆಂದರೆ ಕೆಲಸ, ತಿಕ ಒರೆಸಿಕೊಳ್ಳುವಂತಿಲ್ಲ. ತಿಂಗಳಾದರೂ ಒಂದೇ ಉಡುಪಿನಲ್ಲಿರಬೇಕು, ಜೈಲಿನ ಖೈದಿಗಳಿಗಾದರೂ ಪುರುಸೊತ್ತಿದೆ. ನೆರೆಹೊರೆ ಜಿಲ್ಲೆಗಳು ಪೈಪೋಟಿಗಿಳಿದಿವೆ, ವೀರೇಂದ್ರ ಕುಲಕರ್ಣಿಗೆ ಕೂಲಿಯಾಳುಗಳದ್ದೇ ಚಿಂತೆ. ಮೈನೆರೆಯುವ ಹುಡುಗಿಯರು, ಬಸುರಿಯರಾಗುವ ಹೆಣ್ಣುಗಳು ಇವನ ಎದೆ ದಿಮುಗುಡುವಂತೆ ಮಾಡುವರು. ವೈದ್ಯಾಧಿಕಾರಿಗೆ ಸಾವಿರ ಸಾವಿರ ಹಣ ಕೊಟ್ಟು ಗರ್ಭಪಾತ ಮಾಡಿಸಿದರೂ ಪ್ರಯೋಜನವಾಗುತ್ತಿಲ್ಲ. ಇನ್ನೂ ಅನೇಕರು ಹತ್ತಿ ಕೊಯ್ಯುವಾಗಲೇ ಹಳೆಬಟ್ಟೆ ಹಿಡಿದುಕೊಂಡು ಓಡಿಹೋಗಿ ಗಿಡಗಳ ಗುಂಪಿನೊಳಗೆ ತೂರಿಕೊಳ್ಳುವರು. ಎಷ್ಟೋ ಹೊತ್ತಿಗೆ ಹಿಂತಿರುಗಿದರೂ ಕೆಲಸ ನಿಧಾನ, ಸಾಗುವುದಿಲ್ಲ. ಇನ್ನು ಬಸುರಿಯರ ಕಥೆಯಂತೂ ಹೇಳತೀರದು. ಭೂಮಾಲೀಕರ ಹೊಲತೋಟಗಳಲ್ಲಿ ದುಡಿಯುವ ಹೆಣ್ಣಾಳುಗಳಿಗೆ ಹಾಡುಪಾಡುಗಳ ಕೊರತೆ; ಹಸಿವಿನ ತಲೆನೋವು. ಇದು ಎರಡನೆ ಬಸುರು ಭೀಮವ್ವಳಿಗೆ, ತನ್ನ ಕಿಬ್ಬೊಟ್ಟೆಯ ಹತ್ತಿ ಗಿಡಗಳ ಕಾಂಡಗಳು ತಾಕಿದರೆ ಏನೋ ವಿಚಿತ್ರ ಅನುಭವ, ಉಲ್ಲಸಿತ ಗುಂಗು. ಈ ಸಲ ಇವಳೊಂದಿಗೆ ಇನ್ನೂ ಅನೇಕ ಹೆಣ್ಣುಗಳು ಮಕ್ಕಳನ್ನು ಹೆರುವ ಸರತಿಯಲ್ಲಿರುವರು. ಆದರೆ ಕೆಲಸಕ್ಕೆ ಗೈರುಹಾಜರಾಗಿಲ್ಲ, ತಮ್ಮ ಕೈಲಾದಷ್ಟು ದುಡಿಮೆಗೆ ಇಳಿದಿರುವರು, ಮಾಲೀಕನಿಗೆ ಇದು ಯಾವ ಮೂಲೆಗೂ ಸರಿಹೋಗದು. ಇದರ ಕಾರಣವಾಗಿ ಹೋದ ಸಂಜೆ ಇವರೊಂದಿಗೆ ವ್ಯಾಜ್ಯ ಆಡಿಕೊಂಡು ಹೋಗಿರುವನು. ಉಸಿರು ತೆಗೆದರೆ ಗಂಟಲು ಹರಿದುಹಾಕುವವನಂತೆ ಎಲ್ಲರ ಮೇಲೆ ನುಗ್ಗಿಹೋಗಿರುವನು, ಆದಕಾರಣ ಈಗಿನ ಅವನ ಭೇಟಿ ಇವರಲ್ಲಿ ಆತಂಕ ತಂದಿರುವುದು. ತನ್ನ ತಂದೆ ಬಸವರಾಜ ಕುಲಕರ್ಣಿಯೊಂದಿಗೆ ಈ ವಿಚಾರವಾಗಿ ಹೋದ ರಾತ್ರಿ ದೀರ್ಘವಾಗಿ ಸಮಾಲೋಚನೆ ಮಾಡಿರುವನು.

* * *

'ಜೈಪುರ ಕಾಲು ಬಗ್ಗೆ ಏನಾದ್ರೂ ಯೋಚ್ನೆ ಮಾಡ್ದ?' ಇನ್ನೂ ಸೈಕಲ್ಲನ್ನು ಗೋಡೆಗೆ ಆನಿಸಿರಲಿಲ್ಲ, ಮಹಾಂತೇಶ ಆಗಲೇ ಒಳಗಿನಿಂದಲೇ ಭೀಮವ್ವಳನ್ನು ಕೇಳಿದ. 'ಆ ಸಾಲನೂ ಹಂಗೇ ಐತೆ' ಮತ್ತೊಂದು ಬಾಣ ಬಿಟ್ಟು, ತೆಪ್ಪಗಾದ. ಯಾವಾಗಲೂ ಇವಳ ಹೃದಯಕ್ಕೆ ತೂರಿಬಿಡುವ ಎರಡು ಬಾಣಗಳು. ಬ್ಯಾಗಿನಿಂದ ಒಂದು ಕ್ವಾರ್ಟರ್ ಅನ್ನು ಅವನ ಕೈಗೆ ಕೊಟ್ಟು ಒಲೆ ಅಂಟಿಸಲು ನಡೆದುಬಿಟ್ಟಳು. ನಿಸೂರಾಗಿ ಒಂದು ಕ್ಷಣ ಕುಳಿತುಕೊಳ್ಳುವುದನ್ನು ಮರೆತು ಎಷ್ಟೋ ಕಾಲವಾಗಿಬಿಟ್ಟಿದೆ. ರೊಟ್ಟಿ ತಟ್ಟುತ್ತಿರುವಾಗಲೇ, 'ಜೈಪುರ ಕಾಲು ಎಲ್ಲಿ ಸಿಕ್ತದಂತೆ, ಕೇಳಿನೋಡು'